ಆರ್‌ಬಿಐ/2006-07/117
ಉಲ್ಲೇಖ.ಡಿಜಿಬಿಎ.ಸಿಡಿಡಿ.ಸಂ.ಎಚ್-3253/13-01-299/2006-07

ಆಗಸ್ಟ್ 24.2006
ಭಾಧ್ರ 2, 1928 (ಶಕ)

ಅಧ್ಯಕ್ಷರು/ವ್ಯವಸ್ಥಾಪಕ ನಿರ್ದೇಶಕರು,
ಭಾರತೀಯ ಸ್ಟೇಟ್ ಬ್ಯಾಂಕ್ / ಸಹವರ್ತಿ ಬ್ಯಾಂಕುಗಳು/
17 ರಾಷ್ಟ್ರೀಕೃತ ಬ್ಯಾಂಕುಗಳು/ಎಚ್‌ಡಿಎಫ್‌ಸಿ ಬ್ಯಾಂಕ್ ಲಿ.,/
ಐಸಿಐಸಿಐ ಬ್ಯಾಂಕ್ ಲಿ.,/ ಐಡಿಬಿಐ ಲಿ.,/ಯುಟಿಐ ಬ್ಯಾಂಕ್ ಲಿ.,
ಸ್ಟಾಕ್ ಹೋಲ್ಡಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್.

ಮಾನ್ಯರೆ,

**ಹೂಡಿಕೆದಾರರಿಗೆ ಅವರು ಆಯ್ಕೆ ಮಾಡಿಕೊಂಡ ಸ್ಥಳದಲ್ಲಿ ಪರಿಹಾರ/ಉಳಿತಾಯ ಬಾಂಡುಗಳ ಅರ್ಧವಾರ್ಷಿಕ ಬಡ್ಡಿಯ/ ಅಸಲಿನ ಸಂದಾಯ.**

ನಿಮಗೆ ತಿಳಿದಿರುವಂತೆ, ಏಜೆನ್ಸಿ ಬ್ಯಾಂಕುಗಳು ಸಾಮಾನ್ಯವಾಗಿ, ಹೂಡಿಕೆಯನ್ನು ಮಾಡಲಾಗಿರುವ ಕೇಂದ್ರದಲ್ಲಿ ಸಂದಾಯ ಮಾಡತಕ್ಕ ಬಡ್ಡಿ ವಾರಂಟುಗಳ/ಸಂದಾಯ ಆದೇಶಗಳ ಮೂಲಕ ಪರಿಹಾರ/ಉಳಿತಾಯ ಬಾಂಡುಗಳ ಅರ್ಧ ವಾರ್ಷಿಕ ಬಡ್ಡಿಯನ್ನು ಮತ್ತು ಆ ಬಾಂಡುಗಳ ಅವಧಿ ತುಂಬಿದ ನಂತರ ವಿಮೋಚನಾ ಮೌಲ್ಯವನ್ನು ಸಂದಾಯ ಮಾಡುತ್ತವೆ. ಆದಾಗ್ಯೂ, ಪರಿಹಾರ/ ಉಳಿತಾಯ ಬಾಂಡುಗಳ ಪರಸ್ಥಳದ ಹೂಡಿಕೆದಾರರಿಗೆ ಒದಗಿಸುವ ಗ್ರಾಹಕ ಸೇವೆಯನ್ನು ಮತ್ತಷ್ಟು ಉತ್ತಮ ಪಡಿಸುವ ಸಲುವಾಗಿ, ಪರಿಹಾರ/ಉಳಿತಾಯ ಬಾಂಡುಗಳ ಅಸಲು/ಅವುಗಳ ಮೇಲಿನ ಬಡ್ಡಿಯನ್ನು ಹೂಡಿಕೆ ಮಾಡಿರುವ ಕೇಂದ್ರವಲ್ಲದ ಇತರ ಕೇಂದ್ರದಲ್ಲಿ ಸಂದಾಯ ಮಾಡಬೇಕಾದಲ್ಲಿ ನಿಮ್ಮ ಬ್ಯಾಂಕು, ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ಸಂದಾಯ ಮಾಡತಕ್ಕ ಡಿಮಾಂಡ್ ಡ್ರಾಫ್ಟನ್ನು ವೆಚ್ಚ ವಿಧಿಸದೆ ಅಥವಾ ಒಂದು 'ಸಮ ಬೆಲೆ'ಯ ಚೆಕ್ಕನ್ನು ನೀಡತಕ್ಕದ್ದೆಂದು ಈಗ ನಿರ್ಧರಿಸಲಾಗಿದೆ. ಈ ರೀತಿಯ ಸಂದಾಯಗಳು ಸಹ ನಿಮ್ಮ ಗ್ರಾಹಕರಿಗೆ ದೊರೆಯುತ್ತವೆ ಎಂಬ ಮಟ್ಟಿಗೆ 'ಅನುಬಂಧ-1ಎ' ನಲ್ಲಿ ಅಗತ್ಯ ಬದಲಾವಣೆಗಳನ್ನು ನೀವು ಸೇರ್ಪಡೆ ಮಾಡಬಹುದು.

ತಮ್ಮ ವಿಶ್ವಾಸಿ,

(ಬಿ.ಬಿ.ಸಂಗ್ಮ)
ಪ್ರಧಾನ ವ್ಯವಸ್ಥಾಪಕ